## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ: 01-08-2022

### ಬಸವ ಕಲ್ಯಾಣ ಸಂಚಾರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 41/2022 ಕಲಂ 279,304(ಎ) ಐಪಿಸಿ ಜೋತೆ 187 ಮೋ.ವಾ.ಕಾಯ್ದೆ

ದಿನಾಂಕ 31/07/2022 ರಂದು ಫಿರ್ಯಾದಿ ಶ್ರೀ ಅಕ್ಬರ್ ತಂದೆ ಗುಲಾಬಸಾಬ ಪಠಾಣ, ಉ : ವ್ಯಾಪಾರ, ಸಾ : ಆಶ್ರಯ ಕಾಲೋನಿ ಬಸವಕಲ್ಯಾಣ. ರವರು ಠಾಣೆಗೆ ಹಾಜರಾಗಿ ದೂರು ನೀಡಿದರ ಸಾರಂಶವೆನೆಂದರೆ, ಇವರ ತಂದೆ ಗುಲಾ ¨ಸಾಬ ತಂದೆ ಅಬ್ಬಾಸಲಿ ವಯ : 70 ವರ್ಷ ಇವರು ಜಹಾಂಗೀರ ಭಾಯಿ ರವರ ಕಟ್ಟಿಗೆ ಅಡ್ಡೆಯಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದರು, ಹೀಗಿರುವಲ್ಲಿ ದಿನಾಂಕ 30/07/2022 ರಂದು ಇವರ ತಂದೆಯವರು ನಡೆದುಕೊಂಡು ಮನೆ ಕಡೆಗೆ ಬರುತ್ತಿರುವಾಗ ಸಮಯ ಅಂದಾಜು 08 :45 ಪಿ.ಎಮ್ ಗಂಟೆ ಸುಮಾರಿಗೆ ಮುಚಳಂಬ ಕಡೆಯಿಂದ ಒಂದು ಬಿಳಿ ಬಣ್ಣದ ಬುಲೆರೋ ವಾಹನ ಚಾಲಕನು ತನ್ನ ವಾಹನವನ್ನು ಅತಿವೇಗ ಮತ್ತು ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ರಸ್ತೆ ಪಕ್ಕದಿಂದ ನಡೆದುಕೊಂಡು ಬರುತ್ತಿದ್ದ ಫಿರ್ಯಾದಿಯ ತಂದೆಯವರಿಗೆ ಡಿಕ್ಕಿ ಮಾಡಿ ತನ್ನ ಬುಲೆರೋ ವಾಹನ ಸಮೇತ ಓಡಿ ಹೋಗಿರುತಾನೆ ಸದರಿ ಅಪಘಾತದಲ್ಲಿ ಗಾಯಗೊಂದಿ ಫಿರ್ಯಾದಿಯ ತಂದೆರವರನ್ನು ಅಂಬುಲೆನ್ಸದಲ್ಲಿ ಹೆಚ್ಚಿನ ಚಿಕಿತ್ಸೆ ಕುರಿತು ಬೀದರ ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗುವಾಗ ಮನ್ನಾಎಖೆಳ್ಳಿ ಹತ್ತಿರ ಮಾರ್ಗಮಧ್ಯದಲ್ಲಿ ಸಮಯ 11 :30 ಪಿ.ಎಮ್ ಗಂಟೆಗೆ ಮೃತಪಟ್ಟಿರುತ್ತಾರೆ. ಅಂತಾ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

### ಬಸವ ಕಲ್ಯಾಣ ಗ್ರಾಮೀಣ ಠಾಣೆ 88/2022 ಕಲಂ 11(ಎ)(ಡಿ) ಪ್ರಿವೆನ್ಷನ್ ಆಫ್ ಕ್ರೂಯೆಲ್ಟಿ ಟು ಅನಿಮಲ್ ಆ್ಯಕ್ಟ್ 1960, 5,6,7,12 ಹೆ ದ ಕರ್ನಾಟಕ ಪ್ರಿವೆನ್ಷನ್ ಆಫ್ ಸ್ಲಾಟರ & ಪ್ರಿವೆನ್ಷನ್ ಆಫ್ ಕ್ಯಾಟಲ್ ಆ್ಯಕ್ಟ್ 2020 :-

ದಿನಾಂಕ: 31/07/2022 ರಂದು 13:30 ಗಂಟೆಗೆ ಪಿಎಸ್ಐ ರವರು ರಾಜೇಶ್ವರ ಹೋರ ಠಾಣೆಯಲ್ಲಿದ್ದಾಗ ಫೋನ್ ಮೂಲಕ ಮಾಹಿತಿ ಬಂದಿದೆನೆಂದರೆ, ಬಸವಕಲ್ಯಾಣ ಕಡೆಯಿಂದ ಒಂದು ವಾಹನದಲ್ಲಿ ಸಂಖ್ಯೆ ಎಮ್ಎಚ್-25-ಎಜೆ-4107 ನೇದ್ದರಲ್ಲಿ ಅಕ್ರಮವಾಗಿ ಜಾನುವಾರುಗಳು ತುಂಬಿಕೊಂಡು ಸಾಗಾಟ ಮಾಡುತಿದ್ದಾರೆಂದು ಖಚಿತವಾದ ಮಾಹಿತಿ ಬಂದ ಮೇರೆಗೆ ವಾಹನಗಳು ಚೆಕ್ಕ ಮಾಡುತ್ತಿರುವಾಗ ಸಮಯ 14:40 ಗಂಟೆಯ ಸುಮಾರಿಗೆ ಬಸವಕಲ್ಯಾಣ ಕಡೆಯಿಂದ ಒಂದು ಗೂಡ್ಸ ಟೆಂಪೂ ವಾಹನ ಬರುತ್ತಿರುವದನ್ನು ನೋಡಿ ವಾಹನ ನಿಲ್ಲಿಸಿ ವಾಹನ ಚೆಕ್ಕ ಮಾಡಿ ನೋಡಲು ಅದರಲ್ಲಿ ಜಾನುವಾರುಗಳು ಇರುವದನ್ನು ಖಚಿತ ಪಡಿಸಿಕೊಂಡು ಅದರಲ್ಲಿದ್ದ ವರಿಗೆ ಹೆಸರು ಮತ್ತು ವಿಳಾಸ ವಿಚಾರಿಸಲು ತಮ್ಮ 1) ಮಹೇಬೂಬ ತಂದೆ ಜಬ್ಬಾರ ಖುರೇಷಿ ವಯ:40 ವರ್ಷ ಜಾತಿ:ಮುಸ್ಲಿಂ ಉ:ಟೆಂಪೂ ಚಾಲಕ ಸಾ:ರಾಜೇಶ್ವರ 2) ಫಿರೋಜ ತಂದೆ ಮಹೇತಾಬಸಾಬ ಖುರೇಷಿ ವಯ:34 ವರ್ಷ ಜಾತಿ:ಮುಸ್ಲಿಂ ಉ:ಒಕ್ಕಲುತನ ಸಾ:ರಾಜೇಶ್ವರ ಅಂತಾ ತಿಳಿಸಿದರು ಗೂಡ್ಸ್ ಟೆಂಪೂ ವಾಹನ ಸಂಖ್ಯೆ ನೋಡಲು ಎಮ್ಎಚ್-25, ಎಜೆ-4107 ನೇದು ಇರುತ್ತದೆ. ವಾಹನದಲ್ಲಿ ಐದು ದನಗಳನ್ನು ಇಕ್ಕಟ್ಟಾಗಿ ತುಂಬಿ ಅವುಗಳಿಗೆ ಸಾಕಾಷ್ಟು ಉಸಿರಾಡಲು ಗಾಳಿ, ಮತ್ತು ಆಹಾರದ ವ್ಯವಸ್ಥೆ ಮಾಡದೆ ಉದ್ದೇಶ ಪೂರ್ವಕವಾಗಿ ಚಿತ್ರ ಹಿಂಸೆ ಮತ್ತು ನೋವು ನೀಡಿ ವಾಹನದ ಬದಿಗಳಲ್ಲಿ ಸುರಕ್ಷತೆಗಾಗಿ ಪ್ಯಾಂಡಿಂಗ್ ಇರುವುದಿಲ್ಲಾ, ಅವರಿಗೆ ಸದರಿ ಜಾನುವಾರಗಳ ದಾಖಲಾತಿಗಳು ಮತ್ತು ಸಾಗಾಟ ಮಾಡುತಿದ್ದ ಬಗ್ಗೆ ಪರವಾನಗಿ ಪತ್ರ ವಿಚಾರಿಸಲು ತಮ್ಮ ಹತ್ತಿರ ಯಾವುದೇ ದಾಖಲಾತಿ ಇರುವುದಿಲ್ಲಾ ಹಾಗೂ ಸಾಗಾಟ ಮಾಡಲು ಸರ್ಕಾರದಿಂದ ಪಡೆದ ಪರವಾಗನಿ ಪತ್ರ ಇರುವುದಿಲ್ಲಾ ಅಂತಾ ತಿಳಿಸಿದರು ಪುನಃ ಸದರಿ ಆಕಳಗಳನ್ನು ಎಲ್ಲಿಗೆ ಹಾಗೂ ಯಾವ ಉದ್ದೇಶಕ್ಕಾಗಿ ತೆಗೆದುಕೊಂಡು ಹೋಗುತ್ತಿದ್ದಿರಿ ಅಂತಾ ವಿಚಾರಿಸಲು ನಾವು ಜಾನುವಾರುಗಳನ್ನು ಜಹಿರಾಬಾದ ದಲ್ಲಿರುವ ಕಸಾಯಿ ಖಾನೆಗೆ ಸಾಗಿಸುತ್ತಿದ್ದೇವೆ ಅಂತಾ ಒಪ್ಪಿಕೊಂಡಿದ್ದರಿಂದ ಪಂಚರ ಸಮಕ್ಷಮದಲ್ಲಿ ಸಿಬ್ಬಂದಿಯವರ ಸಹಾಯದಿಂದ ಒಂದೊಂದಾಗಿ ಆಕಳುಗಳನ್ನು ಟೆಂಪೂದಿಂದ ಕೆಳಗೆ ಇಳಿಸಿ ಪರಿಶೀಲಿಸಿ ನೋಡಲು ಅವುಗಳ ವಿವರ ಈ

ಕೆಳಗಿನಂತೆ ಇರುತ್ತದೆ. 1)ಒಂದು ಆಕಳು ಕಪ್ಪು ಬಣ್ಣದ್ದು ವಯ ಅಂದಾಜು 6 ವರ್ಷ ಅ;ಕಿ 22,000/- ರೂ 2)ಒಂದು ಆಕಳು ಕೆಂಪು ಬಣ್ಣದ್ದು ವಯ ಅಂದಾಜು 6 ವರ್ಷ ಅ;ಕಿ 22,000/- ರೂ 3)ಒಂದು ಆಕಳು ಬಿಳಿ ಬಣ್ಣದ್ದು ವಯ ಅಂದಾಜು 7 ವರ್ಷ ಅ;ಕಿ 24,000/- ರೂ 4)ಒಂದು ಆಕಳು ಬಿಳಿ ಬಣ್ಣದ್ದು ವಯ ಅಂದಾಜು 6 ವರ್ಷ ಅ;ಕಿ 22,000/- ರೂ 5)ಒಂದು ಆಕಳು ಬಿಳಿ ಬಣ್ಣದ್ದು ವಯ ಅಂದಾಜು 5 ವರ್ಷ ಅ;ಕಿ 20,000/- ರೂ ಹೀಗೆ ಒಟ್ಟು 1,10,000/- ರೂ ಬೆಲೆವುಳ್ಳ ಮತ್ತು ಅವುಗಳನ್ನು ಸಾಗಿಸಲು ಉಪಯೀಗಿಸಿದ ಟೆಂಪೂ ನಂ ಎಂಹೆಚ-25 ಎಜೆ-4107 ಅ:ಕಿ 9,00,000/- ರೂ ದಷ್ಟು ಜಪ್ತಿ ಮಾಡಿಕೊಂಡು ಆರೋಪಿತರಿಗೆ ವಶಕ್ಕೆ ತೆಗೆದುಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

ಹಳ್ಳಿಖೇಡ (ಬಿ) ಪೊಲೀಸ ಠಾಣೆ ಅಪರಾದ ಸಂಖ್ಯೆ 71/ 2022ಕಲಂ: 3&7 ಇ ಸಿ ಆಕ್ಟ ಮತ್ತು ಕಲಂ: 201 ಐಪಿಸಿ:-

ದಿನಾಂಕ: 31/07/2022 ರಂದು 18:30 ಗಂಟೆಗೆ ಫಿರ್ಯಾದಿ ಬಿಂದುಕುಮಾರಿ ಆಹಾರ ನಿರೀಕ್ಷಕರು ತಹಶೀಲ್ದಾರು ಕಛೇರಿ ಹುಮನಾಬಾದ ರವರು ಠಾಣೆಗೆ ಹಾಜರಾಗಿ  ಹಾಜರ ಪಡಿಸಿದ ವರದಿ ಸಾರಂಶವೆನೆಂದರೆ, ಸುಲ್ತಾನಾಬಾದವಾಡಿ ಗ್ರಾಮ ಶಿವಾರದ ಸರಕಾರಿ ಜಮೀನ ಹೊಲ ಸರ್ವೆ ನಂ 571 ಒಂದು ಲಾರಿ ನಿಂತಿದ್ದು ಅದರಲ್ಲಿ ಸರಕಾರದಿಂದ ಸಾರ್ವಜನಿಕರಿಗೆ ವಿತರಿಸುವ ಅಕ್ಕಿ ಇದ್ದು ಅಕ್ಕಿ ಅಕ್ರಮವಾಗಿ ನೊಂದಣಿ ನಂಬರ ಇಲ್ಲದ ಲಾರಿಯಲ್ಲಿ ಸಾಗಿಸುವ ಕುರಿತು ನಿಲ್ಲಿಸಿರುತ್ತಾರೆ ಅಂತಾ ಖಚಿತ ಭಾತ್ಮಿ ಬಂದ ಮೇರೆಗೆ ಪೊಲೀಸ ಅಧಿಕಾರಿ ಹಾಗೂ ಸಿಬ್ಬಂದಿಯೊಂದಿಗೆ ಪಂಚರ ಸಮಕ್ಷಮ ಸದರಿ ಲಾರಿ ಮೇಲೆ ದಾಳಿ ಮಾಡಿ ಒಟ್ಟು 144 ಕ್ವಿಂಟಲ 71.87 ಕೆ.ಜಿ ಪಿ.ಡಿ.ಎಸ ಅಕ್ಕಿ ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

ಹುಮನಾಬಾದ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 120/2022 ಕಲಂ 32, 34 ಕೆಇ ಕಾಯ್ದೆ 273, 284 ಐಪಿಸಿ :-ದಿನಾಂಕಃ 31/07/2022 ರಂದು 13:30 ಗಂಟೆಗೆ ಪಿಎಸ್ಐ ರವರು ಪೊಲೀಸ್ ಠಾಣೆಯಲ್ಲಿದ್ದಾಗ  ಮೋಬೈಲ್ ಮುಖಾಂತರ ಖಚಿತ ಬಾತ್ಮಿ ಬಂದಿದ್ದೇನೆಂದರೆ, ಹುಮನಾಬಾದ ಪಟ್ಟಣದ ಕಲ್ಲೂರ್ ರೋಡ್ ಬೈಪಾಸ್ ಹತ್ತಿರ ಶ್ರೀ ಸಕರಾಮ ರವರಿಗೆ ಸೇರಿದ ಖುಲ್ಲಾ ಜಾಗೆಯಲ್ಲಿ ಇಬ್ಬರು ವ್ಯಕ್ತಿಗಳು ಸಂಧಿ (ಹೆಂಡ) ವನ್ನು ಅನಧಿಕೃತವಾಗಿ ಮಾರಾಟ ಮಾಡುತ್ತಿದ್ದಾರೆ ಅಂತಾ ಬಾತ್ಮಿ ಬಂದಿದ್ದು, ಇದು ಕಾನೂನು ಬಾಹಿರವಾಗಿದ್ದು, ಸದರಿ ಸಂಧಿಯನ್ನು ಮನುಷ್ಯನು ಸೇವನೆ ಮಾಡಿದಲ್ಲಿ, ಮನುಷ್ಯನ ಪ್ರಾಣಕ್ಕೆ ಅಪಾಯವಾಗುವಂತಹ ಹಾಗೂ ಮಾನವ ದೇಹಕ್ಕೆ ಮರಣಾಂತಿಕ ಹಾನಿ ಉಂಟಾಗುವ ರಾಸಾಯನಿಕ ಮಿಶ್ರಿತ ವಿಷಕಾರಿ ಕಲಬೆರಕೆ ಪಾನಿಯ ಆಗಿದ್ದರಿಂದ ಸಿಬ್ಬಂದಿಯೊಂದಿಗೆ ಹೋಗಿ ದಾಳಿ ಮಾಡಿ ಸೇಂಧಿಯನ್ನು ಮಾರಾಟ ಮಾಡುತ್ತಿದ್ದ ಇಬ್ಬರು ವ್ಯಕ್ತಿಗಳನ್ನು ಹಿಡಿದು ಅವರ ಹೆಸರು ಮತ್ತು ಸೆಂಧಿಯನ್ನು ಸಾರ್ವಜನಿಕರಿಗೆ ಮಾರಾಟ ಮಾಡಲು ಪರವಾನಿಗೆ ಇದೆಯೇ? ಎಂಬುವುದರ ಬಗ್ಗೆ ವಿಚಾರಿಸಲಾಗಿ ಅವರು ತಮ್ಮ ಹೆಸರು 1) ರಾಜು ತಂದೆ ಹಣಮಂತ ಗದವಲ್ ವಯಃ 38 ವರ್ಷ ಜಾತಿಃ ವಡ್ಡರ ಉಃ ಕೂಲಿ ಕೆಲಸ ಸಾಃ ವಾಂಜರಿ ಹುಮನಾಬಾದ ತಾಃ ಹುಮನಾಬಾದ 2) ಗುರುನಾಥ ತಂದೆ ಮಾಳಪ್ಪ ಟಣಕೆ ವಯಃ 48 ವರ್ಷ ಜಾತಿಃ ಜ್ಯೋಶಿ ಉಃ ಕೂಲಿ ಕೆಲಸ ಸಾಃ ಜ್ಯೋಶಿ ಗಲ್ಲಿ ಹುಮನಾಬಾದ ಅಂತಾ ತಿಳಿಸಿ,  ಪರಿಶೀಲಿಸಿ ನೋಡಲು ಸ್ಥಳದಲ್ಲಿ 5 ಲೀಟರ್ ನ 02 ಕ್ಯಾನ್ ಗಳು, ಮತ್ತು 15 ಲೀಟರ್ ನ 03 ಪ್ಲಾಸ್ಟಿಕ್ ಕೊಡಗಳು ಇದ್ದು, ಕೊಡಗಳಲ್ಲಿ ಮತ್ತು ಪ್ಲಾಸ್ಟಿಕ್ ಕ್ಯಾನನಲ್ಲಿ ಸೇರಿ ಒಟ್ಟು 50 ಲೀಟರ್ ಸಂಧಿ (ಹೆಂಡ) ಇದ್ದು, ಅದರ ಕಿಮ್ಮತು ಅಂದಾಜು 1000=00 ರೂಪಾಯಿ ಆಗಿರುತ್ತದೆ ಮತ್ತು ಸ್ಥಳದಲ್ಲಿ ಕುಡಿಯಲು ಉಪಯೋಗಿಸುವ ಒಂದು ಲೀಟರ್ ನ 02 ಪ್ಲಾಸ್ಟೀಕ್ ಖಾಲಿ ಬಾಟಲಗಳೂ ಹಾಗೂ ಒಂದು ಪ್ಲಾಸ್ಟಿಕ್ ಜಗ ಇದ್ದು, ಅವುಗಳ ಅಂದಾಜು ಕಿಮ್ಮತ್ತು 00=00 ರೂಪಾಯಿಗಳಾಗಿತ್ತದೆ. ಜಪ್ತಿ ಮಾಡಿಕೊಂಡು ಆರೋಪಿತರ ವಿರುದ್ದ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೋಳ್ಳಲಾಗಿದೆ.

ಭಾಲ್ಕಿ ನಗರ ಪೊಲೀಸ್ ಠಾಣೆ ಅಪರಾಧ ಸಂಖ್ಯೆ 127/2022 ಕಲಂ 87 ಕೆಪಿ ಕಾಯ್ದೆ :-

ದಿನಾಂಕ 31/07/2022 ರಂದು 16:00 ಗಂಟೆಗೆ ಪಿಸ್ಐ ರವರು ಠಾಣೆಯಲ್ಲಿದ್ದಾಗ ಭಾಲ್ಕಿ ನಗರದ ಪೋತದಾರ ಕಾಪ್ಲೇಕ್ಸ ಹತ್ತಿರ ಸಾರ್ವಜನಿಕ ರಸ್ತೆ ಮೇಲೆ ಕೆಲವು ಜನರು ಸಾರ್ವಜನಿಕ ಖುಲ್ಲಾ ಜಾಗೆಯಲ್ಲಿ ಕುಳಿತುಕೊಂಡು ಹಣವನ್ನು ಪಣಕ್ಕೆ ಇಟ್ಟು ಪರೆಲ್ ಎಂಬ ನಸೀಬಿನ ಇಸ್ಪೇಟ ಜೂಜಾಟ ಆಡುತಿದ್ದಾರೆ

ಅಂತಾ ಖಚಿತ ಮಾಹಿತಿ ಬಂದ ಮೇರೆಗೆ ಸಿಬ್ಬಂದಿಯೊಂದಿಗೆ ಹೋಗಿ ಅವರುಗಳ ಮೇಲೆ ದಾಳಿ ಮಾಡಿ ಹಿಡಿದು ವಿಚಾರಿಸಲು ತಮ್ಮ ಹೆಸರು 1] ಸೂರ್ಯಕಾಂತ ತಂದೆ ಸದಾಶಿವರಾವ ಪೋತದಾರ ವಯಸ್ಸು 67 ವರ್ಷ ಜಾ; ಮರಾಠಾ ಉ; ಒಕ್ಕಲುತನ ಸಾ; ಧುಳಪೇಟಗಲ್ಲಿ ಭಾಲ್ಕಿ. ಅಂತಾ ತಿಳಿಸಿದ್ದು ಸದರಿಯವನ ಹತ್ತಿರ ನಗದು ಹಣ 320/- ಮತ್ತು 3 ಇಸ್ಪೇಟ ಎಲೆಗಳು ಇದ್ದವು. 2] ಮದುಕರ ತಂದೆ ಮಲ್ಲಾರಿರಾವ ತಗರಖೇಡೆ ವಯ 55 ವರ್ಷ ಜಾ; ಮರಾಠಾ ಉ; ಮಿಸ್ತ್ರಿ ಕೆಲಸ ಸಾ; ದೇಶಪಾಂಡೆಗಲ್ಲಿ ಭಾಲ್ಕಿ. ಅಂತ ತಿಳಿಸಿದ್ದು ಸದರಿಯವನ ಹತ್ತಿರ ನಗದು ಹಣ 450/- ರೂ, ಮತ್ತು 3 ಇಸ್ಪೇಟ ಎಲೆಗಳು ಇದ್ದವು. 3] ಕುಶಾಲರಾವ ತಂದೆ ವೀರಶೇಟ್ಟಿ ವದರ್ ಾ ವಯ 71 ವರ್ಷ ಜಾ; ಲಿಂಗಾಯತ ಉ; ಒಕ್ಕಲುತನ ಸಾ; ಭಗವಾನ ಗಲ್ಲಿ ಭಾಲ್ಕಿ ಅಂತಾ ತಿಳಿಸಿದ್ದು ಸದರಿಯವನ ಹತ್ತಿರ ನಗದು ಹಣ 330/- ರೂ ಮತ್ತು 3 ಇಸ್ಪೇಟ ಎಲೆಗಳು ಇದ್ದವು. 4] ರವಿಂದ್ರ ತಂದೆ ಚಂದ್ರಕಾಂತ ಕಾಂಬಳೆ ವಯಸ್ಸು 42 ವರ್ಷ ಜಾ; ಎಸ್.ಸಿ. ಹೊಲಿಯಾ ಉ; ಗುತ್ತಿಗೆದಾರರು ಸಾ; ಜನತಾ ಕಾಲೋನಿ ಭಾಲ್ಕಿ. ಅಂತಾ ತಿಳಿಸಿದ್ದು ಸದರಿಯವನ ಹತ್ತಿರ ನಗದು ಹಣ 250/- ಮತ್ತು 3 ಇಸ್ಪೇಟ ಎಲೆಗಳು ಇದ್ದವು. ಹಾಗೂ ಎಲ್ಲರ ಮಧ್ಯ ಜೂಜಾಟದಲ್ಲಿ ತೊಡಗಿಸಿದ ನಗದು ಹಣ 300 ರೂ ಹಾಗೂ 37 ಇಸ್ಪೆಟ ಎಲೆಗಳು ಇದ್ದವು ಸದರಿಯವರಿಗೆ ಪುನಃ ವಿಚಾರಣೆ ಮಾಡಲು ತಾವೆಲ್ಲರೂ ಹಣವನ್ನು ಪಣಕ್ಕೆ ಇಟ್ಟು ಪರೆಲ್ ಎಂಬ ನಸೀಬಿನ ಇಸ್ಪೇಟ ಜೂಜಾಟ ಆಡುತಿದ್ದ ಬಗ್ಗೆ ಒಪ್ಪಿಕೊಂಡಿದರಿಂದ ಸದರಿಯವರು ಇಸ್ಪೇಟ್ ಜೂಜಾಟದಲ್ಲಿ ತೋಡಗಿಸಿದ ಒಟ್ಟು ನಗದು ಹಣ 1650/- ಹಾಗು 52 ಇಸ್ಪೇಟ ಎಲೆಗಳು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ